

# ಬಣ್ಣ ವೇಷಧಾರಿಯರೆಲ್ಲ ಕಲೆಗಾರ

‘ಬನ್ನಿರಿ ನೋಡಿರಿ ಆನಂದಿಸಿರಿ ದಿವ್ಯ ಶ್ರೀ ಅವರ ಅಪೂರ್ವ ಅಂಬೆಯ ಪಾತ್ರ. ಮಾಧವನ ಅಮೋಘ ಶೃಂಗಾರ ಸಾಲ್ವ. ಮರೆಯಬೇಡಿ ಮರೆತು ನಿರಾಶರಾಗಬೇಡಿ. ಒಂದೇ ಒಂದು ಆಟ! ನಮ್ಮ ಮೇಳದ ವಿಶೇಷ ಆಕರ್ಷಣೆ’ ಇದು ಒಂದು ಕಾಲದಲ್ಲಿ ಕುದುರೆ ಬೆಟ್ಟು ಮೇಳದ ಎನೌನ್ಸ್‌ಮೆಂಟ್. ಆ ಕಾಲಕ್ಕೆ ಜನರಿಗೆಲ್ಲ ಆಶ್ಚರ್ಯವೋ ಆಶ್ಚರ್ಯ. ‘ಅಲ್ಲ ಮಾರ್‍ರೆ ಗಂಡಸರ ಹಾಗೆ ಹೆಂಗಸರು ರಾತ್ರಿಯೆಲ್ಲ ನಿದ್ರೆ ಬಿಟ್ಟು ವೇಷ ಮಾಡ್ಡಿಕ್ಕುಂಟಾ? ಮರ್ಲ್ ಅಲ್ಲವಾ?’ ಅಂತ ಕೆಲವರು ಮಾತಾಡಿಕೊಂಡರೆ ಮತ್ತೆ ಕೆಲವರು ‘ಯೆಂತದೇ ಆಗ್ಲಿ ಒಂದು ಸರ್ತಿ ನೋಡುವ ಹೆಂಗಸರು ಹೇಗೆ ಕುಣೀತಾರೆ ಅಂತ. ಅಂಬೆ ಅಂದ್ರೆ ಕೋಳ್ಯೂರು ಕೊಕ್ಕಡ ಪಾತಾಳ ಎಲ್ಲ ಕಣ್ಣ ಮುಂದೆ ಬರ್ತಾರೆ. ಅವರನ್ನು ಮೀರಿಸುವ ವೇಷ ಮಾಡ್ತಾರಾ ಅಂತ ನೋಡುವ’ ಅಂತ ಹೇಳಿಕೊಂಡು ಆ ವರ್ಷ ಕುದುರೆಬೆಟ್ಟು ಮೇಳದ ಆಟ ನೋಡ್ಲಿಕ್ಕೆ ಸೇರ್ತಿದ್ರು.

ದಿವ್ಯ ಮದ್ದಲೆಯ ಶಂಕರನ ಮಗಳು. ಅವ ಕೇರಳದ ಕಡೆಯವ. ತೆಂಕಿನ ಮೇಳದಲ್ಲಿ ಇದ್ದ. ಕಾಲಕ್ರಮೇಣ ತೆಂಕಿನ ಮೇಳಗಳು ಕಣ್ಣು ಮುಚ್ಚಿದ್ದರಿಂದ ಅವ ಬಡಗಿನ ಮೇಳ ಸೇರಿಕೊಳ್ಳಬೇಕಾಗಿ ಬಂತು. ತೆಂಕಿನ ಮದ್ದಲೆಯ ಪೆಟ್ಟುಗಳನ್ನೇ ಆತ ಬಡಗಿನ ಸ್ಟೈಲಿನಲ್ಲಿ ನುಡಿಸಿ ಕಂಡಾಬಟ್ಟೆ ಫೇಮಸ್ ಆದ. ದುರಂತ ಅಂದ್ರೆ ಇವ ಮೇಳ ಸೇರಿ ಊರೂರು ತಿರುಗ್ತಾ ಇದ್ರೆ ಹೆಂಡತಿ ಪ್ರಾಯಕ್ಕೆ ಬಂದ ಒಬ್ಬಳೇ ಮಗಳನ್ನು ಬಿಟ್ಟು ಯಾರನ್ನೋ ಕಟ್ಟಿಕೊಂಡು ಓಡಿ ಹೋದ್ಲು. ಇದ್ರಿಂದಾಗಿ ಶಂಕರ ಮಗಳನ್ನು ಅನಿವಾರ್ಯವಾಗಿ ತನ್ನ ಮೇಳಕ್ಕೇ ಸೇರಿಸ್ಬೇಕಾಗಿ ಬಂತು. ಸಣ್ಣ ಸಣ್ಣ ವೇಷ ಮಾಡುತ್ತಿದ್ದ ಅವಳು ಒಂದು ದಿವಸ ಮೈನ್ ಸ್ತ್ರೀ ವೇಷದವ ಕೈ ಕೊಟ್ಟಾಗ ಅದನ್ನೇ ಮಾಡಿದಳು.